ಕೇಂದ್ರ ಒಂದು ತರಹ ಪೌಲ್ಟ್ರಿ ಇರಬಹುದು. ಅಲ್ಲಿ ಹೈಬ್ರಿಡ್ ವೆರೈಟ್‌ಗಳನ್ನು ಸಾಕುತ್ತಾರೆ. ನಾನು ವಿಜಿಟ್ ಮಾಡಿದಾಗ ಅಲ್ಲಿ ರಷ್ಯನ್ ಗ್ರೆ, ನ್ಯೂಜಿಲೆಂಡ್ ವೈಟ್, ಮಲೇನಾಡ್ ಬೂಡ ಎಂದು ಮೂರು ತರಹದ ಮೊಲಗಳನ್ನು ಸಾಕಿದ್ದರು. ಅದು ಬಾರಿ ಚೆನ್ನಾಗಿತ್ತು ಮತ್ತು ಆ ಭಾಗದ ಜನರಿಗೆ ಒಳ್ಳೆಯ ಕಸುಬನ್ನು ಉಂಟುಮಾಡಿತ್ತು ಏಕೆಂದರೆ ನಮ್ಮ ಕಡೆ ಮೊಲ ತಿನ್ನುವವರು ಜಾಸ್ತಿ ಇದ್ದಾರೆ. ನಿಮಗೆ ಗೊತ್ತಿರಬಹುದು, ಹಿಂದೆ ಒಂದು ಸಲ ಯಾರೋ ಮೊಲ ಹೊಡೆದರು ಎಂದು ಅವರಿಗೆ ಶಿಕ್ಷೆಯೇ ಆಗಿತ್ತು. ಆದರೆ ಮೊಲದ ಮಾಂಸ ನಿಜಕ್ಕೂ ಆರೋಗ್ಯಕ್ಕೆ ಒಳ್ಳೆಯದು. ಇಂತಹ ಸಂದರ್ಭದಲ್ಲಿ ರೈತರಿಗೆ ಉಪಕಸುಬಾಗಿ, ಜೊತೆಗೆ ಮಾಂಸ ತಿನ್ನುವವರಿಗೆ ಆರೋಗ್ಯಕ್ಕೆ ಒಳ್ಳೆಯದೂ ಆಗಿರುವಾಗ ಆ ಘಟಕ ನಿಲ್ಲುವುದಕ್ಕೆ ಕಾರಣವೇನು?

ಶ್ರೀ ಬಸವರಾಜ್ ಪಾಟೀಲ್ : ಅಲ್ಲಿ ಮೊಲಗಳು ಇರಲಿಕ್ಕೆ ಕಟ್ಟಡ ಇರಲಿಲ್ಲ ಮತ್ತು ಮೇವಿನ ಅಭಾವ ಬಹಳವಾಗಿತ್ತು ಅದರಲ್ಲಿ ಎಷ್ಟು ಮೊಲಗಳನ್ನು ತೆಗೆದುಕೊಂಡಿದ್ದರು ಎಂದು ಡೀಟೇಲಾಗಿ ಕೊಟ್ಟಿಲ್ಲ. ಬರೀ 86 ಸಾವಿರ ರೂಪಾಯಿಗಳು ಮೊಲಗಳಿಗಾಗಿ ಖರ್ಚಾಗಿದೆ ಎಂದು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈಗ ಅಲ್ಲಿ ಮೊಲಗಳಾವುವೂ ಇಲ್ಲ. ಹೊಸದಾಗಿ ಯೋಜನೆ ಹಾಕಿಕೊಂಡು ಈ ವರ್ಷದಿಂದ ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಏನಾಗಿದೆ ಎಂದರೆ ಅಲ್ಲಿದ್ದ ಮೊಲುಗಳು ಏನಾದುವು? ಅಲ್ಲಿದ್ದ ಡಾಕ್ಟರುಗಳು ಏನಾದರೂ ತಿಂದರೋ? ಅಥವಾ ಇದ್ದ ಮೊಲಗಳಾದರೂ ಉಳಿಬೇಕಲ್ಲ ಅಥವಾ ಎಷ್ಟು ಜನ ರೈತರಿಗೆ ಕೊಟ್ಟಿದ್ದಾರೆ? 1990-91 ರಲ್ಲಿ ಬರೀ 8 ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅಲ್ಲಿ ಇದ್ದ ಡಾಕ್ಟರಿಗೆ ಆ ಒಂದು ಕೇಂದ್ರವನ್ನು ಅಭಿವೃದ್ಧಿ ಪಡಿಸುವುದಕ್ಕೆ ಇಚ್ಛೆ ಇರಲಿಲ್ಲ ಎಂದು ಕಾಣುತ್ತದೆ. ಹಾಗಾಗಿ ಆ ಮನುಷ್ಯನೇ ಈ ಒಂದು ಮೊಲ ಸಾಕಾಣಿಕೆ ಕೇಂದ್ರ ಹಾಳಾಗಿರುವುದಕ್ಕೆ ಮುಖ್ಯವಾಗಿ ಕಾರಣನಾಗಿರುತ್ತಾನೆ. ಆ ಕಾಲದಲ್ಲಿ ಯಾವ ಡಾಕ್ಟರು ಇದ್ದರು. ಈ ಮೂಲ ಸಾಗಾಣಿಕೆ ಕೇಂದ್ರ ನಿಂತು ಹೋಗುವುದಕ್ಕೆ ಯಾರು ಕಾರಣರಾಗಿದ್ದಾರೆ, ಅಂಥವರ ಬಗ್ಗೆ ಸೀರಿಯಸ್ ಆಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್: ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಈಗಾಗಲೇ 1989-90 ಹಾಗೂ 1990-91 ರಲ್ಲಿ ಈ ಕೇಂದ್ರದಿಂದ ಒಟ್ಟು 250 ಮೊಲದ ಮರಿಗಳನ್ನು ರೈತರಿಗೆ ಸರಬರಾಜು ಮಾಡಲಾಗಿದೆ, ಕೊಟ್ಟಿದ್ದಾರೆ. ಆದರೂ ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಲ್ಲಿರತಕ್ಕಂಥ ಡಾಕ್ಟರುಗಳಾಗಿಲಿ, ಯಾವುದೇ ಅಧಿಕಾರಿಗಳಾಗಲಿ ಅದರಲ್ಲಿ ದುರುಪಯೋಗ ಮಾಡಿದ್ದಾರೆ ಎಂದು ಕಂಡುಬಂದರೆ ಆದಷ್ಟು ಬೇಗ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಬೈಲಹೊಂಗಲ ತಾಲೂಕಿನ ಕುಲವಳಿ ಗ್ರಾಮದ ರೈತರುಗಳಿಗೆ ತೊಂದರೆ

2303 - ಶ್ರೀ ಬಾಬುಗೌಡ ಪಾಟೀಲ, (ಕಿತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ತಾಲ್ಲೂಕಿನ ಕುಲವಳಿ ಗ್ರಾಮದ (ಸರಹದ್ದಿನಲ್ಲಿರುವ) ಸುಮಾರು 6,000 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸಾವಿರಾರು ರೈತರ ಜಮೀನಿನ ರೈತ ಹಕ್ಕು ಇತ್ತೀಚೆಗೆ ಉಚ್ಚ ನ್ಯಾಯಾಲಯದ ಆದೇಶದ ಮೂಲಕ ನಷ್ಟವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರ ಈ ಬಗ್ಗೆ ಮೇಲ್ಮನವಿ ಸಲ್ಲಿಸಿ ಸಾವಿರಾರು ಬಡ ಕುಟುಂಬಗಳನ್ನು ರಕ್ಷಿಸಲು ಮುಂದಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಆ) ಹೌದು ಬಂದಿದೆ.

ಆ) ಮುಂದಾಗುವುದು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇದೊಂದು ಸುಮಾರು ಏಳು ಸಾವಿರ ಎಕರೆ ಜಮೀನು ಮತ್ತು ಹತ್ತು ಸಾವಿರ ಜನರ ತೊಡಕಿನ ಸಮಸ್ಯೆಯಾಗಿದೆ. ಶೂರ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟಂಥ ಉದ್ದೇಶಕ್ಕಾಗಿ ಫಾತ್ಕಿ ಇನಾಂ ಎಂದು ಹೇಳಿಕೊಟ್ಟಂಥ ಜಮೀನು ಇದು. ಇವತ್ತಿಗೂ ದೇವೇಂದಪ್ಪ ಇನಾಂದಾರ್ ಎನ್ನುವವರ ಹೆಸರಿನಲ್ಲಿ 4435 ಎಕರೆ ಜಮೀನು ಇದೆ. ಆಮೇಲೆ ಬಾಳಾ ಸಾಹೇಬ್ ಇನಾಂದಾರ್ ಎನ್ನುವವರ ಹೆಸರಿನಲ್ಲಿ 2918 ಎಕರೆ ಜಮೀನು ಇದೆ. ಇತ್ತೀಚೆಗೆ 1-7-91ರಂದು ಭೂ ನ್ಯಾಯ ಮಂಡಳಿ ಇದು ಸರ್‌ಪ್ಲಸ್ ಭೂಮಿ ಎಂದು ಘೋಷಣೆಯನ್ನು ಮಾಡಿದೆ, ಆದೇಶವನ್ನು ಕೊಟ್ಟಿದೆ. ಆದರೆ ಈ ಇನಾಂದಾರರು ಈ ಜಮೀನನ್ನು ಬೇನಾಮಿಯಾಗಿ ಯಾರ್ಯಾರಿಗೋ ಕೋಟಾ ರೀತಿಯಿಂದ ಖರೀದಿ ಬರೆದುಕೊಟ್ಟಿದ್ದಾರೆ. ಅವರು ಈಗ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಆದರೆ ಈ ಏಳು ಸಾವಿರ ಎಕರೆ ಜಮೀನನ್ನು 50-60 ವರ್ಷಗಳಿಂದ ಕೆಲವು ರೈತರು ಅಂದರೆ ಸುಮಾರು ಏಳೆಂಟು ಸಾವಿರ ಜನ ಆ ಕುಲವಳಿ ಗ್ರಾಮದಲ್ಲಿ ಮಾಡಿಕೊಂಡು ಬಂದಿದ್ದಾರೆ. ಈಗ ಅವರ ಗತಿಯೇನು ಎನ್ನುವುದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ, ಕೋರ್ಟಿನಲ್ಲಿ ಅವರ ವಿರುದ್ಧವಾಗಿದೆ. ಅದಕ್ಕಾಗಿ ಈ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಮತ್ತೆ ಹೋಗಬೇಕಾದಂಥ ಅವಶ್ಯಕತೆ ಇದೆ. ನಾನು ಈಗಾಗಲೇ ನಮ್ಮ ರೆವಿನ್ಯೂ ಸೆಕ್ರೆಟರಿಯವರಿಗೆ ಹೇಳಿದ್ದೇನೆ. ಯಾವುದೇ ರೀತಿಯಿಂದ ಈ ಕೇಸನ್ನು ನಾವು ಗೆಲ್ಲತಕ್ಕಂಥದ್ದು ನೋಡಬೇಕು. ಏಕೆಂದರೆ, ಒಂದು ಸಲ ಇದು ನಮ್ಮ ಕೈ ಬಿಟ್ಟು ಹೋಯಿತು ಎಂದರೆ ಸುಮಾರು ಏಳೆಂಟು ಸಾವಿರ ಎಕರೆ ಭೂಮಿ ಹೋಗುತ್ತದೆ. ಇದರಲ್ಲಿ 9976 ಎಕರೆ ಇದೆ. ಆದರೆ ಇದು ಏಕೆ ಈ ರೀತಿಯಾಗಿ ಆಗಿದೆ ಎನ್ನತಕ್ಕಂಥ ಸವಿಸ್ತಾರವಾದ ಮಾಹಿತಿ ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಆದರೆ ಯಾವ ರೀತಿಯಾಗಿ ಆ ಜಮೀನನ್ನು ನಾವು ಪಡೆದುಕೊಳ್ಳಬೇಕು ಎನ್ನತಕ್ಕಂಥ ಸಲಹೆಯನ್ನು ಕೊಟ್ಟರೆ ಖಂಡಿತವಾಗಿಯೂ ಆ ದಾರಿಯಲ್ಲಿ ನಾವು ಹೋಗಬಹುದು. ಆದರೆ ಫುಲ್ ಬೆಂಚ್‌ನಲ್ಲಿ ನಮ್ಮ ವಿರುದ್ಧ ಆದಕಾರಣ ಅಂದರೆ ಟೆನೆಂಟ್ಸ್‌ಗಾಗಲಿ ಅಥವಾ ಯಾರು ಪೊಸೆಷನ್‌ನಲ್ಲಿದ್ದಾರೆ ಅವರ ವಿರುದ್ಧವಾದ ಕಾರಣ ಈ ಒಂದು ಸಮಸ್ಯೆ ಉದ್ಭವಿಸಿದೆ. ಅದಕ್ಕಾಗಿಯೇ ನಾನು ಇವತ್ತು ನಮ್ಮ ರೆವಿನ್ಯೂ ಸೆಕ್ರೆಟರಿಯವರಿಗೆ ಹೇಳಿದ್ದೇನೆ. ಇದನ್ನು ಇಲ್ಲಿಗೇ ಬಿಡಬಾರದು. ಈ ಕೇಸನ್ನು ಸುಪ್ರೀಂಕೋರ್ಟಿಗೆ ಒಯ್ದು ಆ ಜನರಿಗೆ ಸಹಾಯವನ್ನು ಮಾಡತಕ್ಕಂಥ ರೀತಿಯಲ್ಲಿ ಮಾಡಬೇಕು ಎನ್ನತಕ್ಕಂಥ ಆದೇಶವನ್ನು ಕೊಟ್ಟಿದ್ದೇನೆ ಮತ್ತು ಇದಕ್ಕೆ ಮೀರಿ ಬೇರೆ ಕಾನೂನು ರೀತಿ ಏನಾದರೂ ತಮಗೆ ಗೊತ್ತಿದ್ದರೆ ತಾವು ಸಲಹೆಯನ್ನು ಕೊಟ್ಟರೆ ಅದರ ಪ್ರಕಾರ ಇದನ್ನು ಸಾಲ್ವ್ ಮಾಡತಕ್ಕಂಥ ಪ್ರಯತ್ನವನ್ನು ಮಾಡೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಇಂಥ ಒಂದು ಕಾನೂನನ್ನು ಮಾಡಬಹುದು. ಬ್ರಿಟಿಷರು ಯಾರ್ಯಾರಿಗೆ ಈ ರೀತಿ ಫಾತ್ಕಿ ಇನಾಂನ್ನು ಕೊಟ್ಟಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದಮೇಲೆ 45 ವರ್ಷಗಳಾದ ನಂತರವೂ ಈ ಫಾತ್ಕಿ

ಇನಾಂನ್ನು ವಶಪಡಿಸಿಕೊಳ್ಳುವುದಕ್ಕೆ ಒಂದು ಕಾನೂನನ್ನು ಮಾಡಿಲ್ಲ. ಅವರು ಸಾವಿರಾರು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅಂಥ ಒಂದು ಸೂಕ್ತ ಕಾನೂನನ್ನು ಮಾಡಿ ಆ ಘಾತ್ಕಿ ಇನಾಂ ಜಮೀನನ್ನೆಲ್ಲಾ ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ಯೋಚನೆಯನ್ನೇನಾದರೂ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದನ್ನು ನಾನು ಲಾ ಡಿಪಾರ್ಟ್‌ಮೆಂಟನವರ ಜೊತೆಯಲ್ಲಿ ಚರ್ಚೆ ಮಾಡಿ ಪರಿಶೀಲಿಸುತ್ತೇನೆ. ತಾವು ಕೊಟ್ಟಂಥ ಸಲಹೆಯನ್ನು ಪರಿಶೀಲಿಸುತ್ತೇನೆ. ಬೇಕಾದರೆ ಒಂದು ಸಲ ತಾವು ಬಂದರೆ, ನಾವು ನೀವೂ, ಲಾ ಡಿಪಾರ್ಟ್‌ಮೆಂಟ್‌ನವರೂ ಸೇರಿ ಚರ್ಚೆ ಮಾಡೋಣ. ಇದೊಂದೇ ಅಲ್ಲ, ಬಿಜಾಪುರದಲ್ಲಿ ಕೆಲವು ಜಮೀನುಗಳು ಇವೆ ಎಂದು ಕೇಳಿದ್ದೇನೆ. ಬಾಂಬೆ-ಕರ್ನಾಟಕದಲ್ಲಿಯೂ ಅಲಲ್ಲಿ ಇದೆ ಎಂದು ಕೇಳಿದ್ದೇನೆ. ಹಳಿಯ ಮೈಸೂರಿನಲ್ಲಿ ಇದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಒಂದು ಚರ್ಚೆಯನ್ನು ಮಾಡಿ ಯಾವ ರೀತಿಯಾದಂಥ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಆ ಕುಲವಳಿ ಗ್ರಾಮದಲ್ಲಿ ರೆವಿನ್ಯೂ ರೆಕಾರ್ಡ್‌ನಲ್ಲಿ ಘಾತ್ಕಿ, ಇನಾಂ ಎಂದು ಇದ್ದ ಕಾರಣ ಅಲ್ಲಿನ ಜನರಿಗೆ ಮನೆಗಳನ್ನು ಕಟ್ಟಲಿಕ್ಕೆ ಅವಕಾಶವಿಲ್ಲ. ಪರ್ಮಿಶನ್ ಇಲ್ಲ, ಆಮೇಲೆ ಸಾಲಕ್ಕೆ ಹೋದರೆ ರೆವಿನ್ಯೂ ರಿಕಾರ್ಡ್‌ನಲ್ಲಿ ಇನಾಮ್ ಎಂದು ಇದೆ, ಆದಕಾರಣ ಸಾಲ ಸಿಗುವುದಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಅವರು ಸರ್ಕಾರದ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಆದುದರಿಂದ ತಾತ್ಕಾಲಿಕವಾಗಿಯಾದರೂ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಇನಾಂ ಎಂಬ ಶಬ್ಧವನ್ನು ತೆಗೆಸಿ ಆ ಜನರು ಬದುಕಲಿಕ್ಕೆ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಮಾಡಿಕೊಳ್ಳುತ್ತೀರೋ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಧಾರವಾಡದಲ್ಲಿ ಇದೆ. ಬಾಗಲೋಟೆಯ ಎಂ.ಎಲ್.ಸಿಯವರಾದ ನಾಡಗೌಡರು ಸಹ ಹೇಳುತ್ತಿದ್ದರು. ಬಿಜಾಪುರದಲ್ಲಿಯೂ ಕೂಡ ಈ ಸಮಸ್ಯೆಗಳು ಇವೆ. ಆದ್ದರಿಂದ ಕಾನೂನು ಇಲಾಖೆಯವರನ್ನು ಕರೆಸಿ ಈ ಜನರಿಗೆ ಯಾವರೀತಿ ಸಹಾಯ ಮಾಡಲಿಕ್ಕೆ ಸಾಧ್ಯವಿದೆ ಅದನ್ನು ನಾವು ನೀವೂ ಸೇರಿ ಖಂಡಿತವಾಗಿ ಮಾಡೋಣ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸಂಗೊಳ್ಳಿ ರಾಯಣ್ಣನನ್ನು ಹಿಡಿದುಕೊಟ್ಟಿದ್ದಕ್ಕಾಗಿ ಈ ಭೂಮಿಯನ್ನು ಘಾತಕಿ ಇನಾಮು ಎಂದು ಕೊಟ್ಟಿದ್ದಾರೆ. ಬ್ರಿಟಿಷರು ಏನು ಪೆದ್ದರಲ್ಲ, ಬ್ರಿಟಿಷರು ಚರಿತ್ರೆಯನ್ನು ಸರಿಯಾಗಿ ದಾಖಲೆ ಮಾಡಿದ್ದಾರೆ. ಅವರು ಘಾತಕತನ ಮಾಡಿದರು ಎಂದು ಘಾತಕಿ ಇನಾಮ್ ಎಂದೇ ಬರೆದಿದ್ದಾರೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಅವರು ಘಾತ್ಕಿ ಮಾಡಿದರೋ ಇಲ್ಲವೋ ಅದರ ಬಗ್ಗೆ ಹೇಳುವುದು ಸರಿಯಲ್ಲ. ಇನಾಮ್‌ದಾರರ ಹೆಸರನ್ನು ತೆಗೆದುಕೊಂಡು ಹೇಳಿದರಲ್ಲ.

Prof. M.D. Nanjundaswamy: No, No, The name is inamdar because he received the Inam. Why are you defending the Ghatakies?

ಶ್ರೀ ಪಿ.ಸಿ. ಸಿದ್ಧನಗೌಡರ್: ಹೆಸರು ಹೇಳುವುದು ಬೇಡ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಎತಕ್ಕೆ ಬೇಡ. The title was given by the Britishers, before that he was not an Inamdar ಇಂತಹ ಘಾತಕಗಳು ಇದ್ದಾರೆ. ಇವರಲ್ಲಿ ಕೆಲವರನ್ನು ಇನಾಮ್‌ದಾರ್ ಎಂದು ಹೇಳುತ್ತಾರೆ, ಮತ್ತೆ ಕೆಲವರು ದೇಸಾಯಿ ಎಂದು ಹೇಳುತ್ತಾರೆ. ಈ ಇನಾಮ್ ಭೂಮಿಗಳಷ್ಟೇ ಅಲ್ಲ, ದೇಸಾಯಿಕಿ

ಭೂಮಿಯಿಂದಲೂ ಬಾಂಬೆ-ಕರ್ನಾಟಕದಲ್ಲಿ ಬಹಳ ತೊಂದರೆಯಾಗುತ್ತಿದೆ. ಮಾನ್ಯ ಬಾಬಾಗೌಡ ಪಾಟೀಲರು ಎತ್ತಿದ ವಿಷಯ ನನ್ನ ಕ್ಷೇತ್ರಕ್ಕೆ ಸೇರಿದ್ದು, ಧಾರವಾಡದ ಗ್ರಾಮಾಂತರ ಕ್ಷೇತ್ರಕ್ಕೆ ಸೇರಿದ್ದುದು. ಅಲ್ಲಿನ ರೈತರಿಗೆ ಮನೆಕಟ್ಟಲಿಕ್ಕೆ ಆಗುತ್ತಾ ಇಲ್ಲ. ಏಕೆಂದರೆ ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಇನ್ನೂ ದೇಸಾಯಿ ಜಮೀನು, ಇನಾಮ್ ಜಮೀನು ಎಂದು ಬರೆದಿದೆ. ಭೂ ಸುಧಾರಣಾ ಕಾನೂನು ಬಂದಿದೆಯೆಂಬ ಭ್ರಮೆಯಲ್ಲಿ ನಾವು ಬದುಕುತ್ತಿದ್ದೇವೆ. ಇದನ್ನು ಆದಷ್ಟು ಬೇಗ ಸರಿಪಡಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಹೇಳಿದ್ದೇನೆ. ಒಂದು ಸಭೆಯನ್ನು ಕರೆಯಿಸಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಲಾ ಡಿಪಾರ್ಟ್‌ಮೆಂಟಿನಿಂದ ಎಕ್ಸಾಮಿನ್ ಮಾಡಿಸಿ, ಆ ಭಾಗದ ಜನರಿಗೆ ಯಾವ ರೀತಿ ಸಹಾಯಮಾಡಬೇಕು ಎಂಬುದನ್ನು ಯೋಚನೆ ಮಾಡಿ, ಕ್ರಮ ಕೈಗೊಳ್ಳುತ್ತೇವೆ.

ರಾಯಚೂರು ಜಿಲ್ಲೆಗೆ ಮದರ್‌ಡೈರಿ

2313 - ಶ್ರೀ ಹಂಪನಗೌಡ (ಸಿಂಧನೂರು) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಗೆ ಮದರ್‌ಡೈರಿ ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೆ? (ಕೆಲಸ ಯಾವ ಹಂತದಲ್ಲಿದೆ).

ಆ) ರಾಯಚೂರು ಜಿಲ್ಲೆಯಲ್ಲಿರುವ ಶೀತಲೀಕರಣಗಳ ಸಂಖ್ಯೆ: ಎಷ್ಟು (ತಾಲ್ಲೂಕು ಹಾಗೂ ಸ್ಥಳ ಹೆಸರು ತಿಳಿಸುವುದು)

ಇ) ಹೊಸದಾಗಿ ಶೀತಲೀಕರಣ ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೆ?

ಈ) ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳೆಷ್ಟು (ಪ್ರತಿನಿತ್ಯ ಉತ್ಪಾದನೆಯಾಗುವ ಹಾಲು ಎಷ್ಟು)?

ಉ) ಸಿಂಧನೂರು ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳೆಷ್ಟು (ಸಂಘಗಳ ಹೆಸರು ಮತ್ತು ಉತ್ಪತ್ತಿಯಾಗುವ ಪ್ರತಿಯೊಂದು ಸಂಘದ ಹೆಸರು ಮತ್ತು ಪ್ರಮಾಣ ತಿಳಿಸುವುದು).

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವ) :

ಅ) ಇಲ್ಲ

ಆ) ಎರಡು.

1. ಗಂಗಾವತಿ - ಗಂಗಾವತಿ ತಾಲ್ಲೂಕು

2. ರಾಯಚೂರು ನಗರ - ರಾಯಚೂರು ತಾಲ್ಲೂಕು.

ಇ) ಇದೆ.

ಈ) ರಾಯಚೂರು ಜಿಲ್ಲೆಯಲ್ಲಿ 94 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ಈ ಪೈಕಿ 83 ಸಹಕಾರ ಸಂಘಗಳು ಕಾರ್ಯಚರಣೆಯಲ್ಲಿದ್ದು, ದಿನಂಪ್ರತಿ 20,000 ಲೀಟರ್ ಹಾಲನ್ನು ಶೇಖರಿಸುತ್ತಿವೆ.

ಉ) 26 ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಈ ಸಂಘಗಳ ಹೆಸರು ಮತ್ತು ಹಾಲಿನ ಪ್ರಮಾಣವನ್ನು ಅನುಬಂಧ-1 ರಲ್ಲಿ ತಿಳಿಸಲಾಗಿದೆ.